## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ.ರವರ ನ್ಯಾಯಾಲಯ, ತಿಪಟೂರು.

## ಸಿ.ಸಿ.ನಂ. 650/2018

**ಪಿರ್ಯಾದುದಾರರು** : ಮಂಜುನಾಥ್. ಎಂ.ಎಸ್.

**ವಿರುದ್ಧ**

**ಆರೋಪಿತರು** : 1. ಮೆ. ಶ್ರೀ ಸಾಯಿ ಸಂದೇಶ್ ಟ್ರೇಡರ್ಸ್, ಎಪಿಎಂಸಿ ಯಾರ್ಡ್, ತಿಪಟೂರು ಇದರ ಪ್ರೊಪ್ರೈಟರ್ ಪ್ರಿಯಾ ವಿ.ಎಸ್.

2. ಶ್ರೀಮತಿ ಪ್ರಿಯಾ ವಿ.ಎಸ್. ಕೋಂ ಮಯೂರನಾಥ್, ಸುಮಾರು 52 ವರ್ಷ, ವೆಟರ್ನರಿ ಆಸ್ಪತ್ರೆ ರಸ್ತೆ ಮಯೂರ ಕಾಂಪೌಂಡ್ ಕೋಟೆ, ತಿಪಟೂರು ಟೌನ್.

## <u>ಆರೋಪಣೆ</u>

ಶ್ರೀ ಸತೀಶ್. ಎಸ್.ಟಿ., ಬಿ.ಕಾಂ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ., ತಿಪಟೂರು ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ವಿರುದ್ಧ ಮಾಡುತ್ತಿರುವ ಆರೋಪಣಾ ಸಾರಾಂಶವೇನೆಂದರೆ:

ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದುದಾರರಿಂದ **ರೂ.8,28,264/-** ಗಳ ಕೊಬ್ಬರಿಯನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ತೀರುವಳಿ ಸಲುವಾಗಿ ಆರೋಪಿಯಾದ ನೀವು ತಿಪಟೂರು ಶಾಖೆಯ ಎಸ್.ಬಿ.ಐ. ಬ್ಯಾಂಕಿನ **ದಿಃ 05.06.2018** ರ **ಚೆಕ್ ನಂ.727796** ನ್ನು **ರೂ. 8,28,264/-** ಗಳಿಗೆ ನಿಮ್ಮ ಸಹಿ ಮಾಡಿ ಪಿರ್ಯಾದಿ ಪರವಾಗಿ ವಿತರಿಸಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್.ನ್ನು ತಿಪಟೂರು ಕೆ.ಆರ್. ಬಡಾವಣೆ ಶಾಖೆಯ ಕರ್ನಾಟಕ ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು **ಚೆಕ್.ದಾತರ ಖಾತೆಯನ್ನು ಮುಚ್ಚಲಾಗಿದೆ (Account stopped)** ಎಂದು ತಿಳಿಸಿ ದಿಃ06.06.2018 ರಂದು ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ಪಿರ್ಯಾದಿಗೆ

ಹಿಂದಿರುಗಿಸಿದ್ದು, ತದನಂತರ ಪಿರ್ಯಾದುದಾರರು ಅವರ ವಕೀಲರ ಮೂಲಕ ಆರೋಪಿಯಾದ ನಿಮಗೆ ಹಣ ತಗಾದೆ ಮಾಡಿ ದಿಃ 08.06.2018 ರಂದು ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸ್ ದಿಃ11.06.2018 ರಂದು ನಿಮಗೆ ಜಾರಿಯಾಗಿದ್ದು, ಅದಾದ ನಂತರವೂ ಸಹ ಆರೋಪಿಯಾದ ನೀವು ಪಿರ್ಯಾದಿಗೆ ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲ ಹಾಗೂ ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ಮೇಲ್ಕಂಡ ಚೆಕ್ ನ್ನು ಪಿರ್ಯಾದಿ ಪರವಾಗಿ ವಿತರಿಸಿದ್ದು, ಸದರಿ ನಿಮ್ಮ ಕೃತ್ಯವು **ವ್ಯವಹರಣೀಯ ಲಿಖಿತಗಳ ಅಧಿ ನಿಯಮ ಕಲಂ. 138** ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ ಎಂದು ನಿಮ್ಮ ಮೇಲೆ ಆರೋಪಿಸಲಾಗಿದೆ.

**(ಸತೀಶ್. ಎಸ್.ಟಿ.)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ.,
ತಿಪಟೂರು

**ಆರೋಪಿಯ ಹೇಳಿಕೆ**

ಪ್ರಶ್ನೆ:1) ಇದೀಗ ಓದಿ ಹೇಳಿದ ಆರೋಪಣಾ ಸಾರಾಂಶವು ನಿಮಗೆ ಅರ್ಥವಾಯಿತೇ?

ಉತ್ತರ:-

ಪ್ರಶ್ನೆ:2) ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರ:-

(ದಿನಾಂಕ: **28.08.2019** ರಂದು ತೆರೆದ ನ್ಯಾಯಾಲಯದಲ್ಲಿ ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು, ಮೇಲಿನ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳನ್ನು ಪಡೆದು ಯಥಾವತ್ತಾಗಿ ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ.,
ತಿಪಟೂರು